(6ನೇ ಪುಟದಿಂದ)

ಜಾಗತಿಕ ಕ್ಯಾನ್ವಾಸ್‌ನಲ್ಲಿ ಕನ್ನಡ– ಕರ್ನಾಟಕವನ್ನು ಪ್ರತಿನಿಧಿಸುತ್ತಿರುವ ಕೆಲವೇ ಕಲಾವಿದರಲ್ಲಿ ಕಾಶಿಯವರೂ ಒಬ್ಬರು. ಬೆಂಗಳೂರಿನ ಕೆನ್ ಕಲಾಶಾಲೆ ಹಾಗೂ ಚಿತ್ರಕಲಾ ಪರಿಷತ್‌ನಲ್ಲಿ ಚಿತ್ರಕಲೆಯ ಪಟ್ಟುಗಳನ್ನು ಕಲಿತ ಅವರು, ಬರೋಡಾ ವಿಶ್ವ ವಿದ್ಯಾಲಯದಿಂದ ಲಲಿತಕಲಾ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪೇಂಟಿಂಗ್, ಕಾಗದ ಶಿಲ್ಪ, ಛಾಯಾಗ್ರಹಣ, ಪ್ರಿಂಟ್ ಮೇಕಿಂಗ್– ಹೀಗೆ ವಿವಿಧ ಪ್ರಕಾರಗಳನ್ನು ತಮ್ಮ ಸೃಜನಶೀಲತೆಯ ಅಭಿವ್ಯಕ್ತಿಗೆ ಕಾಶಿ ಬಳಸಿಕೊಳ್ಳುತ್ತಿದ್ದಾರೆ. ಇವರ ಕಲಾಕೃತಿಗಳು ಭಾರತ ಹಾಗೂ ವಿಶ್ವದ ವಿವಿಧೆಡೆಗಳಲ್ಲಿನ ಸಂಗ್ರಹಾಲಯ ಗಳಲ್ಲಿ ಸ್ಥಾನ ಪಡೆದಿವೆ.

ಕಳೆದ ನಾಲ್ಕು ವರ್ಷಗಳಲ್ಲಿ ಅವರು ರೂಪಿಸಿದ ಕಲಾಕೃತಿಗಳ 'ತಿರುಗಾಟ' ಪ್ರಸ್ತುತ ಬೆಂಗಳೂರಿನಿಂದ ಆರಂಭವಾಗಿದೆ. (ಸುಮುಖ ಗ್ಯಾಲರಿಯಲ್ಲಿ ಫೆ.3ರಿಂದ 20ರವರೆಗೆ). 'ಗೇಮ್' ಎನ್ನುವ ಹೆಸರಿನ ಆಯ್ದ ಇಪ್ಪತ್ತೈದು ಕಲಾಕೃತಿಗಳ ಪಯಣ ಬೆಂಗಳೂರಿನಿಂದ ಚೆನ್ನೈ, ಮುಂಬೈ ಹಾಗೂ ದೆಹಲಿಗೆ ಸಾಗಲಿದೆ.

'ಗೇಮ್' ಎನ್ನುವುದಕ್ಕೆ ಜಾಗತೀಕರಣ ಸಂದರ್ಭದಲ್ಲಿ ವಿವಿಧ ಅರ್ಥಗಳಿವೆ. ವ್ಯಾಪಾರ, ಯುದ್ಧ, ಬುದ್ಧನ ಹೆಸರಲ್ಲಿ ಬಾಂಬ್ ಸಿಡಿಸುವ ರಾಜಕಾರಣ– ಇವೆಲ್ಲವೂ 'ಗೇಮ್'ನ ಮುಖಗಳೇ. ಈ ಅನಂತ ಮುಖಗಳನ್ನು ಹಿಡಿದಿಡುವ ಹಂಬಲ ರವಿಕಾಶಿ ಅವರ ಕಲಾಕೃತಿಗಳಲ್ಲಿ ಎದ್ದು ಕಾಣುತ್ತದೆ.

ಈ ದಿನಗಳ ತವಕ ತಲ್ಲಣಗಳ ಜೊತೆಗೆ ಪರಂಪರೆ– ಸಂಸ್ಕೃತಿ ವಿಸ್ಮೃತಿಗಳ ತಿಳಿವಳಿಕೆಯೂ ಕಾಶಿ ಅವರಿಗಿದೆ. ಆ ಕಾರಣದಿಂದಲೇ ಅವರಿಗೆ ಮಹಾಭಾರತ, ಬುದ್ಧಭಾರತ ಹಾಗೂ ಬಾಂಬ್ ಭಾರತಗಳನ್ನು ಒಟ್ಟಿಗೆ ನೋಡುವುದು ಸಾಧ್ಯ ವಾಗಿದೆ. ಈ ಅದ್ಭುತ 'ಕೊಲಾಜ್ ಸೃಷ್ಟಿ'ಯನ್ನು ಶರಶಯ್ಯೆಗೆ ಸಿದ್ಧವಾಗುವಂತೆ ಕಾಣುತ್ತಿರುವ ಬುದ್ಧ ಹಾಗೂ ಆಟಿಕೆ ಕುದುರೆಯ ಮೇಲೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡ ಬುದ್ಧನ ಕಲಾಕೃತಿಗಳಲ್ಲಿ ಕಾಣಬಹುದು. ಕಣ್ಣಿಗೆ ಬಟ್ಟೆ ಕಟ್ಟುವುದರಲ್ಲಿ ವಾಸ್ತವವನ್ನು ಮರೆಮಾಚುವ ಪ್ರಯತ್ನವಿದೆ. ಆದರೆ ಅಂತಃಚಕ್ಷುವಿಗೆ ಯಾವ ಪಟ್ಟಿ ಕಟ್ಟುವುದು? ನಮ್ಮನ್ನು ನಾವು ವಂಚಿಸಿಕೊಳ್ಳುವ ಚಿತ್ರ ಕಟ್ಟಿಕೊಡುವಲ್ಲಿ, ಆ ಮೂಲಕ ಒಳಹೊರಗಣ ಜಿಜ್ಞಾಸೆ ಹುಟ್ಟಿಸುವಲ್ಲಿ ಕಾಶಿ ಯಶಸ್ವಿಯಾಗಿದ್ದಾರೆ. 'ಎಂಗೇಜಿಂಗ್ ಬುದ್ಧ' ಶೀರ್ಷಿಕೆಯ ಸರಣಿ ಚಿತ್ರಗಳು ಕಾರ್ಪೊರೇಟ್ ಸಂದರ್ಭದಲ್ಲಿ ಅಧ್ಯಾತ್ಮದ ಹೊಸರೂಪ ಅಥವಾ ವಿರೂಪದ ಸಂಕೇತದಂತೆಯೂ ಇದೆ.



ಕಾಶಿ

ಕಾಶಿ ಅವರ ಈವರೆಗಿನ ಕಲಾಕೃತಿಗಳು ಪ್ರಯೋಗಶೀಲತೆಗೆ ಹೆಸರಾದವು. ಈ ಪ್ರಯೋಗಶೀಲತೆ ಇಲ್ಲಿನ ಚಿತ್ರಗಳಲ್ಲೂ ಎದ್ದು ಕಾಣುವಂತಿದೆ. ಛಾಯಾಗ್ರಹಣದಲ್ಲೂ ಆಸಕ್ತಿಯಿರುವ ಕಾಶಿ, ಈಚಿನ ವರ್ಷಗಳಲ್ಲಿ ಸಂಗ್ರಹಿಸಿದ ಕುತೂಹಲಕರ ವಸ್ತು ಗಳನ್ನು ತಮ್ಮ ಸ್ಟುಡಿಯೋದಲ್ಲಿ ಬೇರೆಬೇರೆ ಕೋನದಲ್ಲಿ ಜೋಡಿಸಿ, ಅವುಗಳಿಂದ ವಿವಿಧಾರ್ಥಗಳನ್ನು– ಅನಿರೀಕ್ಷಿತ ಅರ್ಥಗಳ ಜಾದೂವನ್ನು– ಹೊಮ್ಮಿಸುವ ಪ್ರಯತ್ನ ನಡೆಸಿದ್ದಾರೆ. ಈ ಚಿತ್ರಗಳನ್ನು ನಿರ್ದಿಷ್ಟವಾಗಿ ಹೆಸರಿಸುವುದು ಕಷ್ಟ. ಶುದ್ಧರೂಪದಲ್ಲಿ ಛಾಯಾಚಿತ್ರಗಳಲ್ಲದ, ಪೇಂಟಿಂಗ್‌ಗಳೂ ಅಲ್ಲದ, ಕೊಲಾಜ್ ಕೂಡ ಅಲ್ಲದ ಪ್ರಕಾರವಿದು. ಕಲೆಯ ವಿವಿಧ ಪ್ರಕಾರಗಳನ್ನು ಪ್ರಯೋಗಶೀಲ ಮನಸ್ಸೊಂದು ಒಳಗೊಳ್ಳುವ ಪ್ರಕ್ರಿಯೆಯಂತೆ 'ಗೇಮ್' ಗಮನಸೆಳೆಯುತ್ತದೆ.

